ಸಿಸಿನಂ.212/2022

ಪಿಡಬ್ಲ್ಯೂ:1

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,</u>

<u>ಕುಮಟಾ.</u>

ಸಿಸಿ ನಂ. 212/2022

ಪಿಡಬ್ಲೂ : 2

| | | |
|---|---|---|
| ಹೆಸರು | : | ಶ್ರೀ ನಿತಿನ |
| ತಂದೆಯ ಹೆಸರು | : | ಹರಿದಾಸ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಆಫೀಸರ್ ಕೆನರಾ ಬ್ಯಾಂಕ |
| ವಾಸ್ತವ್ಯ | : | ಅಂಕೋಲಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 24-07-2024 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ಪಿರ್ಯಾದುದಾರರ ಪರವಾಗಿ : ಶ್ರೀ ಪಿ ಎಸ್ ಎನ್ ವಕೀಲರಿಂದ :</u>**

1. ನಿಪಿ-1 ನಮ್ಮ ಬ್ಯಾಂಕ ಖಾತೆಗೆ ಸಂಬಂಧಪಟ್ಟ ಚೆಕ್ . ಸದರಿ ಬ್ಯಾಂಕ ಖಾತೆ ಅಬಿನಂದನ ಎಮ್ ಖಾರ್ವಿ ಇವರ ಹೆಸರಿನಲ್ಲಿ ಇದೆ . ದಿಃ 29-06-2021 ರಂದು ಹಾಗೂ ದಿಃ 02-07-2021 ರಂದು ಅವರ ಖಾತೆಯಲ್ಲಿ ರೂ. 600/- ರಿಂದ ರೂ. 700/- ಇತ್ತು . ಸಾಕ್ಷಿ ಆರೋಪಿ ಬ್ಯಾಂಕ ಖಾತೆಯ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿದ್ದು ನಿಪಿ-6 ಎಂದು ಗುರುತಿಸಲಾಯಿತು .

**<u>ಪಾಟೀ ಸವಾಲು : ಆರೋಪಿತನ ಪರವಾಗಿ : ಶ್ರೀ ಎಸ್ ಆರ್ ಎಸ್ ವಕೀಲರಿಂದ :</u>**

2. ನಾವು ನಿಪಿ-1 ಚೆಕ್ ಗೆ ಸಂಬಂಧಪಟ್ಟಂತೆ ಯಾವುದೇ ಹಿಂಬರಹ ನೀಡಿಲ್ಲ ಎಂದರೆ ಸರಿ . ನಮ್ಮ ಬ್ಯಾಂಕಿನಿಂದ ಚೆಕ್ ಬುಕ್ ನ್ನು ಯಾವಾಗ ನೀಡಲಾಗಿದೆ ದಾಖಲಾತಿ ನೋಡಿ ಹೇಳಬೇಕು . ನಿಪಿ-1 ಹಳೇಯ ಚೆಕ್ ಆಗಿರುವುದರಿಂದ present ಮಾಡಲು validity ಇರಲಿಲ್ಲ ಎಂದರೆ ಸರಿಯಲ್ಲ . ನಿಪಿ-

2ರಲ್ಲಿ return unreliased in clearing on July 2021 due to reason ಎಂದು ಹಿಂಬರಹವನ್ನು ನಮ್ಮ ಬ್ಯಾಂಕಿನಿಂದ ನೀಡಲಾಗಿಲ್ಲ ಕಾರಣ ಸದರಿ ಹಿಂಬರಹವನ್ನು ನೀಡಿದ ಬ್ಯಾಂಕಿನವರು ಕಾರಣ ಹೇಳಲು ಸೂಕ್ತ ವ್ಯಕ್ತಿ ಆಗಿರುತ್ತಾರೆ . ದಿಃ 29-06-2021ರಂದು ಹಾಗೂ ದಿಃ 02-07-2021ರಂದು ಆರೋಪಿಯ ಖಾತೆ ಅಸ್ತಿತ್ವದಲ್ಲಿ ಇತ್ತು . ಯಾವುದೇ ಒಂದು ಪಾಲ್ಟ ಇದ್ದರೂ ಚೆಕ್ ಪಾಸಾಗುವುದಿಲ್ಲ ಎಂದರೆ ಸರಿ . ಚೆಕ್ ಹಾಜರು ಮಾಡಿದಾಗ ಹಿಂಬರಹ ಕೊಡುವಾಗ ಪ್ರೊಸಿಜರ್ ಇರುತ್ತದೆ ಎಂದರೆ ಸರಿ . ಸಾಕ್ಷಿ ಬ್ಯಾಂಕ್ ಮಾಡುವುದಿಲ್ಲ, ಆದರೆ ಸೆಂಟ್ರರಲೈಜ್ ಗ್ರಿಟ್ಸ ಸ್ಕ್ಯಾನ್ ಕಾಪಿ ಕಳಿಸಿ ಓನಲೈನ್ ಮೂಲಕ ಮಾಡಲಾಗುತ್ತದೆ . ಚೆಕ್ ವ್ಯಾಲಿಡಿಟಿ ಇಲ್ಲದೇ ಇದ್ದಾಗ ಅಥವಾ ಚೆಕ್ ನಲ್ಲಿ ಯಾವುದೇ ಫೋಲ್ಟ ಇದ್ದಾಗೆ ಖಾತೆಯಲ್ಲಿ ಸಾಕಷ್ಟು ಹಣ ಇದ್ದರೂ ಕುಡಾ ಚೆಕ್ ನಗದಾಗುವುದಿಲ್ಲ ಎಂದರೆ ಸರಿ . ಕೆಲವೊಂದು ಸಂದರ್ಭದಲ್ಲಿ ಚೆಕ್ ಬೋನ್ಸ ಮಾಡಲು ಆಗುವುದಿಲ್ಲ ಎಂದರೆ ಸರಿ .

**ಮರು ವಿಚಾರಣೆಃ ಪಿರ್ಯಾದುದಾರರ ಪರವಾಗಿ : ಶ್ರೀ ಪಿ ಎಸ್ ಎನ್ ವಕೀಲರಿಂದ :**

3. ಯಾವ ಬ್ಯಾಂಕಿಗೆ ಚೆಕ್ ನ್ನು ನಗದೀಕರಣಕ್ಕಾಗಿ ಹಾಜರು ಮಾಡಲಾಗಿದೆ ಅವರೇ ಓನಲೈನ್ ಮೂಲಕ ಚೆಕ್ ಮಾಡಿ ಹಿಂಬರಹ ಕೊಡಬಹುದು ಎಂದರೆ ಸರಿ . ಓನಲೈನ್ ಮೂಲಕ ಅವರ ಖಾತೆಯಲ್ಲಿ ಎಷ್ಟು ಹಣ ಇದೆ ಎಂಬುದನ್ನು ಕೂಡ ತಿಳಿದುಕೊಳ್ಳಲಾಗುತ್ತದೆ ಎಂದರೆ ಸರಿ . ನಿಪಿ-1 ಚೆಕ್ ಮೇಲ್ನೋಟಕ್ಕೆ ವ್ಯಾಲಿಡ್ ಚೆಕ್ ಆಗಿರುತ್ತದೆ .

**ಮರು ಪಾಟೀ ಸವಾಲು : ಆರೋಪಿತನ ಪರವಾಗಿ : ಶ್ರೀ ಎಸ್ ಆರ್ ಎಸ್ ವಕೀಲರಿಂದ :**

4. ಚೆಕ್ ನಗದೀಕರಣಕ್ಕೆ ಯೋಗ್ಯವಾಗಿರದೇ ಇದ್ದಾಗ ಖಾತೆಯಲ್ಲಿ ಸಾಕಷ್ಟು ಹಣ ಇದ್ದರೂ ಕೂಡ ನಗದೀಕರಣ ಆಗುವುದಿಲ್ಲ ಎಂದರೆ ಸಾಕ್ಷಿ ಚೆಕ್ ಯಾಕೆ ಯೋಗ್ಯ ಇಲ್ಲ ಎಂದು ಬ್ಯಾಂಕಿನವರು

ಬರೆದುಕೊಡಬೇಕೆಂದು ನುಡಿದಿರುತ್ತಾರೆ. ಹೊಸ ಸಿಸ್ಟಮ್ ಪ್ರಕಾರ ಈ ಚೆಕ್ ವ್ಯಾಲಿಡ್ ಹೌದೋ ಅಲ್ಲವೋ ಎಂದು ನನಗೆ ನೇರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ .

ಮರು ವಿಚಾರಣೆ :ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.